ಹಾಕಿರೋದು, ವಾಶ್ನೆ ಚನ್ನಾಗೈತೆ. ನಿರ್ಮಲ ಅನ್ನೊ ಹೆಸರು ಬಲು ಚಂದಾಗದೆ. ನಮ್ಮೂರ್ನಾಗೆ ಯಾರೂ ಇಂಥ ಚಂದವಾದ ಹೆಸರು ಇಟ್ಕಂಡಿಲ್ಲ.'' ಎಂದು ಹುಡುಗಿಯ ಮುಖ ನೋಡಿಕೊಂಡೇ ನೀರು ಕುಡಿದಿದ್ದ. ಹಾಗೆ ನಡೆಯುತ್ತಿದ್ದ ಪ್ರಕ್ರಿಯೆಯಲ್ಲಿ ನೀರು ಕಟವಾಯಿಯಿಂದ ಸ್ಲಿಪ್ ಆಗಿ ಅಂಗಿಯ ಮೇಲೆ ಚಲ್ಲಿ ಪ್ಯಾಂಟ್ ಜಿಪ್ಪಿನವರೆಗೂ ಹರಡಿಕೊಂಡಿತ್ತು. ''ನಾನು ಹಾಕಿರೋದು ಪೌಡ್ರಲ್ಲ, ಸೆಂಟು.'' ಎಂದು ನಕ್ಕವಳು, ''ನಿಮ್ಮ ಮೊಬೈಲ್ ನಂಬರ್ ಏನು?'' ಎಂದು ವಯ್ಯಾರದಿಂದ ಕೇಳಿದ್ದಳು. ತಂಗ್ಯನು ನಾಚುತ್ತಾ, ''ನನ್ನತ್ರ ಮೊಬೈಲ್ ಫೋನಿಲ್ಲ.'' ಎಂದಿದ್ದ. ಹುಡುಗಿ ಇವನೆಂಥಾ ಅಮಾಯಕ ಎಂದು ಮುಖ ಕೆಂಪಗೆ ಮಾಡಿಕೊಂಡು, ''ಸಿಗರೇಟು, ಡ್ರಿಂಕ್ಸ್ ಅಭ್ಯಾಸ ಏನಾದ್ರೂ ಐತಾ?'' ಎಂದು ಮತ್ತೆ ಕೇಳಿದ್ದಳು. ''ಥೂ ನಮ್ ತಾಯಾಣೆಗೂ, ರಂಗನಾಥ್ ಸ್ವಾಮಿ ಸತ್ವಾಗ್ಲೂ ಒಂದೇ ಒಂದು ದಪಾನೂ ಬಾಯಿಗೆ ಬಿಟ್ಟಂಡೋನಲ್ಲ. ಬೇಕಾದ್ರೆ ನಮ್ಮುನ್ನೆ ಕೇಳ್ಕ.'' ಎಂದು ಸತ್ಯ ನುಡಿದಿದ್ದ. ''ಅಯ್ಯೋ ನಿಮ್ಮಂಥೋರು ಅಪರೂಪ. ನಂದು ಮೊಬೈಲ್ ನಂಬರ್ ಕೊಡ್ತೀನಿ.'' ಎಂದು ಅಲ್ಲೆ ಪೆಟ್ಟಿಗೆಯ ಮೇಲಿಟ್ಟಿದ್ದ ಬಾಲ್ ಪೆನ್ ತೆಗೆದುಕೊಂಡು ತಂಗ್ಯನ ಬಲ ಅಂಗೈಯಲ್ಲಿ ಹತ್ತು ನಂಬರ್ ಬರೆದು, ''ಊರಿಗೆ ಹೋದ್ಮೇಲೆ ಎಲ್ಲಾದ್ರೂ ಬರ್ಕಳ್ರಿ. ಮೊಬೈಲ್ ತಗಂಡ್ಮೇಲೆ ಫೋನ್ ಮಾಡ್ರಿ.'' ಎಂದು ಗಿಳಿಯಂತೆ ಉಲಿದಿದ್ದಳು. ನಿರ್ಮಲ ಎಂಬ ಹುಡುಗಿಯ ಕೈ ಸೋಕಿದ್ದರಿಂದ ತಂಗ್ಯನಿಗೆ ಜೀವ ಝುಲ್ಲೆಂದು, ಆ ಕಂಪನದಲ್ಲಿ ರೋಮಾಂಚನ ಹುಟ್ಟಿ, ''ಹಂಗೆ ಆಗ್ಲಿ ನಿರ್ಮಲ.'' ಎಂದು ಬಲಗೈಯನ್ನು ಪ್ಯಾಂಟಿನ ಜೇಬಿಗೆ ಇಟ್ಟುಕೊಂಡು ಅತ್ಯಂತ ಸಂಭ್ರಮಿತನಾಗಿ ಅಡುಗೆ ಮನೆಯಿಂದ ಹೊರಕ್ಕೆ ಬಂದಾಗ ಎಲ್ಲರೂ ಹಟ್ಟಿ ಮುಂದೆ ಮಾತನಾಡುತ್ತಾ ನಿಂತಿದ್ದರು. ಎಲ್ಲರೂ ಹೊರಗಿದ್ದದ್ದು ನೋಡಿ ಹುಡುಗಿಯನ್ನು ಒಂದಪ ತಬ್ಕೊಬೇಕಾಗಿತ್ತು ಎಂದು ತಂಗ್ಯನಿಗೆ ಅನ್ನಿಸಿದರೂ, ಮದುವೆಗೆ ಮುಂಚೆ ಹಂಗೆಲ್ಲ ಮಾಡಿದ್ರೆ ಮರ್ಯಾದೆ ಇರಲ್ಲ ಎಂದು ಸಮಾಧಾನ ಪಟ್ಟುಕೊಂಡ.

ಪ್ರಿಯ ವಾಚಕ ಮಹನೀಯರೇ, ಇವೊತ್ತಿನ ದಿನಮಾನಗಳಲ್ಲಿ ಇಡೀ ಜಗತ್ತಿನಾದ್ಯಂತ ಹುಟ್ಟಿದ ಮಕ್ಕಳು ಕೂಡಾ ಮೊಬೈಲ್ ಫೋನೆಂಬ ಮಾಯೆಯಲ್ಲಿ ಮುಳುಗಿ ಏಳುತ್ತಿರುವಾಗ ನಮ್ಮ ಕಥಾನಾಯಕ ತಂಗ್ಯ ಉರೂಫ್ ಮಂಜಣ್ಣ ಅಥವಾ ಮಂಜಣ್ಣ ಉರೂಫ್ ತಂಗ್ಯನಂಥವರು ಪ್ರಪಂಚದ ಮೇಲೆ ಇನ್ನೂ ಅಲ್ಲೊಬ್ಬರು, ಇಲ್ಲೊಬ್ಬರು ನೆಮ್ಮದಿಯಿಂದ ಉಸಿರಾಡಿಕೊಂಡು ಉಳಿದುಕೊಂಡಿದ್ದಾರೆಂಬುದೇ ವಿಸ್ಮಯದ ಮತ್ತು ಪುಣ್ಯದ ಸಂಗತಿ. ಊರಿನಲ್ಲಿ ಅವನಿಗಿಂತ್ಲೂ ಏಳು ಹಿಂದೆ ಹುಟ್ಟಿದವರೂ ಉಣ್ಣುವಾಗ, ಹೇಲುವಾಗ, ಉಚ್ಚೆ ಹುಯ್ಯುವಾಗ ಕೂಡಾ ಹುಚ್ಚು ಹಿಡಿದವರಂತೆ ಮೊಬೈಲ್ ಫೋನಿನಲ್ಲಿ ಕಡ್ಡಿಪುಳ್ಳೆ ಆಡಿಸಿಕೊಂಡಿರುವಾಗ ತಂಗ್ಯನು ಮಾತ್ರ ಆ ಕಡೆ ಕಣ್ಣೆತ್ತಿಯೂ ನೋಡುತ್ತಿರಲಿಲ್ಲ. ಹಾಗೆಂದು ಅವುಗಳ ಬಗ್ಗೆ ಜ್ಞಾನ ಇರಲಿಲ್ಲ ಎಂದೇನಲ್ಲ. ಒಂಬತ್ತನೆಯ ಕ್ಲಾಸು ಫೇಲಾಗಿದ್ದರೂ ಕನ್ನಡವನ್ನು ಫಸ್ಟ್ ಕ್ಲಾಸಾಗಿ ಓದುತ್ತಿದ್ದನಲ್ಲದೆ ಬರೆಯುತ್ತಲೂ ಇದ್ದ. ಊರಿನ ಸುಮಾರು ಜನ, ''ಲೇ ಅಪ್ಪಯ್ಯ ತಂಗ್ಯ, ಮಿಡ್ಲಿಸ್ಕೂಲ್ಗೋಗೋ ಹುಡುಗ್ರಿಂದ ಹಿಡ್ದು ಹಂದಿ ಮೇಯ್ಸೋರ್‌ಗುಂಟ್ಲೂವೇ ಮೊಬೈಲ್ ಇಟ್ಟವ್ರೆ. ಹೆಣ್ಣೆಂಗ್ಸುರು ಕೂಡಾ ತಾಳಿ ಜೊತ್ಗೆ ಮೊಬೈಲ್‌ನ ಕೊಳ್ಗೆ ನೇತಾಕಂಬ್ತಾರೆ. ಅಂತದ್ರಲ್ಲಿ ಇಪ್ಪತ್ತಾರೊರ್ಷ ಪ್ರಾಯದ ಗಂಡ್ಸು ನೀನು. ನಿನ್ನಂತೋನತ್ರ ಫೋನಿಲ್ಲ ಅಂದ್ರೆ ನಾಚಿಕೆ ಆಗ್ಬೇಕು ಬಿಡಲೇ ಅತ್ತ. ಮಧುಗಿರಿ ಶಂಕರ್ ಶೆಟ್ಟಿ ಅಂಗ್ಡೀಲಿ ಐನೂರು ರೂಪಾಯಿ ಕೊಟ್ರೆ ಎಂಥ ಮೊಬೈಲ್ ಫೋನ್ಬೇಕು. ಯಿಪಾಟಿ ಬೇಸಾಯ ಮಾಡ್ತೀಯ, ಏನ್ ಕಂಜೂಸ್ತನ ತೋರಿಸ್ತೀಯೋ.'' ಎಂದು ರೇಗಿಸಿದ್ದರು. ಅವರಿಗೆಲ್ಲ ತಂಗ್ಯನು, ''ನಂಗೇನುಕ್ಕದು. ಉಪ್ಪಿಗೆ ಬರಲ್ಲ, ಮೆಣಸಿನ ಕಾಯಿಗೆ ಬರಲ್ಲ. ಅದೇನೋ ಹೇಳ್ತಾರಲ್ಲ ಮಾಡೊ ಕೆಲ್ಸ ಬಿಟ್ಟು ಆಡೋ ದಾಸಯ್ನಿಂದೆ ಹೋದ್ರಂತೆ ಅನ್ನೊಂಗಾಗ್ತೈತೆ. ನಂಗೇನೂ ಬೇಡಪ್ಪ ಅದ್ರ್ ಸವಾಸ. ಇಷ್ಟುಕ್ಕೂ